ಕೊಡುಗೆಯ ಚರಿತ್ರೆಯನ್ನು ಸರಿಯಾಗಿ ಪರಿಗಣಿಸಲಿಲ್ಲ. ಅಷ್ಟೇಕೆ ಅ.ನ.ಕೃ. ಅವರ ‘ಸಂಧ್ಯಾರಾಗ’, ನಿರಂಜನರ ‘ಚಿರಸ್ಮರಣೆ’, ಕಟ್ಟೀಮನಿಯವರ ‘ಜ್ವಾಲಾಮುಖಿಯ ಮೇಲೆ’ ಕಾದಂಬರಿಗಳನ್ನು ಅವರ ಉತ್ತಮ ಕೃತಿಗಳೆಂದು ಹೇಳಲು ಹತ್ತಾರು ವರುಷಗಳೇ ಬೇಕಾದವು. ಶ್ರೇಷ್ಠತೆಯ ಸೊಕ್ಕಿನ ಫಲವೇ ಈ ವಿಳಂಬ ವಿಮರ್ಶೆಯ ವಿಪರ್ಯಾಸ!

ಯಾವುದನ್ನು ಕೆಲವರು ‘ಶ್ರೇಷ್ಠ ಸಾಹಿತ್ಯ’ವೆಂಬ ಶ್ರೇಣಿಯಲ್ಲಿ ಪರಿಭಾವಿಸುತ್ತ ಬಂದರೋ, ಅಂಥವರು ಅರಿತುಕೊಳ್ಳಬೇಕಾದ ಒಂದು ವಾಸ್ತವವೆಂದರೆ – ಓದುಗರೇ ಇಲ್ಲದಿದ್ದರೆ ಯಾವುದೇ ಶ್ರೇಣಿಯ ಸಾಹಿತ್ಯ ಉಳಿಯುವುದಿಲ್ಲ. ಸಿನಿಮಾ ವಿಷಯಕ್ಕೂ ಇದು ಅನ್ವಯಿಸುತ್ತದೆ; ನಾಟಕಕ್ಕೂ ಅನ್ವಯವಾಗುತ್ತದೆ. ಹಾಗೆ ನೋಡಿದರೆ ಎಲ್ಲಾ ಕಲೆಗಳಿಗೂ ಆಯಾ ಕಲಾ ಪ್ರಕಾರದ ಆಸಕ್ತರು ಮುಖ್ಯವಾಗುತ್ತಾರೆ. ಸಾಹಿತ್ಯಕ್ಕೆ ಓದುಗರು, ಸಂಗೀತಕ್ಕೆ ಕೇಳುಗರು, ನಾಟಕ-ಸಿನಿಮಾಗಳಿಗೆ ನೋಡುಗರು ಬೇಕೇ ಬೇಕು. ಆದ್ದರಿಂದ ಆತ್ಮಸಂತೋಷವೊಂದಕ್ಕಾಗಿಯೇ ಅಭಿವ್ಯಕ್ತಿ ಮಾಡುತ್ತೇವೆನ್ನುವುದು ಅರೆ ಆತ್ಮವಂಚನೆಯ ಮಾತೂ ಆಗಬಹುದು. ಬರೆದಾಗ, ಆಡಿದಾಗ, ಹಾಡಿದಾಗ, ನುಡಿಸಿದಾಗ, ಆತ್ಮಸಂತೋಷ ಆಗುವುದು ನಿಜ. ಆದರೆ, ಬರೆದದ್ದನ್ನು ಪ್ರಕಟಿಸುವುದು, ನಾಟಕವನ್ನು ಆಡುವುದು, ವೇದಿಕೆಗಳಲ್ಲಿ ಹಾಡುವುದು, ವಾದ್ಯಗಳನ್ನು ನುಡಿಸುವುದು, ಸಿನಿಮಾಗಳಿಗೆ ಚಿತ್ರಮಂದಿರ ಹುಡುಕುವುದು, ಟಿ.ವಿ. ಪ್ರಸಾರಕ್ಕೆ ಹಂಬಲಿಸುವುದು ಯಾಕೆ? ಜನರಿಗೆ ತಲುಪಿಸುವ ಹಂಬಲದಿಂದ ಇಷ್ಟೆಲ್ಲ ಆಗುತ್ತದೆ. ಆದ್ದರಿಂದ ಆತ್ಮಸಂತೋಷವೆನ್ನುವುದು ಜನಸಂತೋಷದಲ್ಲಿಯೇ ಪೂರ್ಣಗೊಳ್ಳುತ್ತದೆ. ಈ ನಿಟ್ಟಿನಲ್ಲಿ ವಿವಿಧ ಶ್ರೇಣಿಯ ಸಾಹಿತ್ಯಾದಿ ಕಲಾಪ್ರಕಾರಗಳನ್ನು ಪೋಷಿಸುವ ಅಭಿರುಚಿ ನಿರ್ಮಾಣ ಮುಖ್ಯವಾಗುತ್ತದೆ. ಸಾಹಿತ್ಯದ ವಿಷಯಕ್ಕೆ ಬಂದರೆ, ವಾಚನಾಭಿರುಚಿಯನ್ನು ಬೆಳೆಸಿದ

> ಅಗ್ಗದ ಸಾಹಿತ್ಯವು ಯಾವುದೇ ಕಾಲಘಟ್ಟದಲ್ಲಿ ಬಂದರೂ ನಿರ್ಲಕ್ಷ್ಯಕ್ಕೆ ಯೋಗ್ಯ. ಆದರೆ, ಸದಾಶಯ ಹೊತ್ತು ಬರುವ ‘ಜನಪ್ರಿಯ ಸಾಹಿತ್ಯ’ವನ್ನು ನಿರ್ಲಕ್ಷಿಸಬಾರದು. ಅಂತೆಯೇ ಜನಪ್ರಿಯ ಸಂಸ್ಕೃತಿಯನ್ನು ನಿರ್ಲಕ್ಷಿಸಬಾರದು.

ಕೀರ್ತಿ ನಿಜವಾದ ಜನಪ್ರಿಯ ಸಾಹಿತಿಗಳಿಗೆ ಸಲ್ಲುತ್ತದೆ. ಈ ಸಾಲಿಗೆ ಈಗಾಗಲೇ ಉದಾಹರಿಸಿದ ಸಾಹಿತಿಗಳಲ್ಲದೆ ಚದುರಂಗ, ಸತ್ಯಕಾಮರೇ ಮುಂತಾದ ಅನೇಕ ಸಾಹಿತಿಗಳು ಸೇರುತ್ತಾರೆ. ವಿಶೇಷವಾಗಿ ತ್ರಿವೇಣಿ, ಎಂ.ಕೆ. ಇಂದಿರಾ, ಅನುಪಮಾ ನಿರಂಜನರಾದಿಯಾಗಿ ಅನೇಕ ಲೇಖಕಿಯರ ಕೊಡುಗೆಯೂ ದೊಡ್ಡದು. ಆದರೆ, ಮಹಿಳಾ ಬರಹಗಾರರನ್ನು ಸಾರಾಸಗಟಾಗಿ ನಿರ್ಲಕ್ಷಿಸುವ ನಿಲುವು ಅನೇಕ ‘ಶ್ರೇಷ್ಠ’ರದ್ದಾಗಿತ್ತು. ಮಹಿಳೆಯರು, ಶೂದ್ರರು, ದಲಿತರು, ಆಧುನಿಕ ಅಕ್ಷರ ಲೋಕಕ್ಕೆ ಬರಲು ಇದ್ದ ಸಾಮಾಜಿಕ ಶ್ರೇಣೀಕರಣದ ಅಡ್ಡಿ ಆತಂಕಗಳು ಇಂಥವರಿಗೆ ಕಾಣಿಸಲಿಲ್ಲ. ಅಥವಾ ಕೃತಿ ಮಾತ್ರ ಮುಖ್ಯವಾಗಿ ಕೃತಿಕಾರ ಮತ್ತು ಸಮಾಜದ ಶ್ರೇಣಿ ಸಂಬಂಧದ ಸೂಕ್ಷ್ಮಗಳು ವಿಮರ್ಶೆಯ ಭಾಗವಾಗಲಿಲ್ಲ. ಮಹಿಳೆಯರ ಅನುಭವ ಜಗತ್ತನ್ನು ನಿಯಂತ್ರಿಸಿದ ಸಾಮಾಜಿಕ-ಆರ್ಥಿಕ ಸಂರಚನೆಯ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಲಿಲ್ಲ. ಲೇಖಕಿಯರನ್ನೂ ಒಳಗೊಂಡಂತೆ ಜನಪ್ರಿಯ ಸಾಹಿತ್ಯವಲಯದ ಬರಹಗಾರರು ವಾಚನಾಭಿರುಚಿಯನ್ನು ವಿಸ್ತರಿಸದೆ ಹೋಗಿದ್ದರೆ ‘ಶ್ರೇಷ್ಠ’ವೆಂದು ಭಾವಿಸಿದ ಕೃತಿಗಳತ್ತ ಸಾಗುವ ಪ್ರಕ್ರಿಯೆಯೇ ಕುಂಠಿತವಾಗುತ್ತಿತ್ತು. ಆದ್ದರಿಂದ ಜನಪ್ರಿಯ ಸಾಹಿತಿಗಳು ಚಾರಿತ್ರಿಕವಾಗಿ ಮುಖ್ಯವಾಗುತ್ತಾರೆ.

ಇಲ್ಲಿಯೇ ಇನ್ನೊಂದು ಮಾತನ್ನು ಹೇಳಬೇಕು. ಮಧ್ಯಮದರ್ಜೆಯವರೆಂದು ಶ್ರೇಣೀಕರಿಸಿ ಕೆಲವರನ್ನು ‘ಮೀಡಿಯೋಕರ್’ ಸಾಹಿತಿಗಳೆಂದು ಕರೆಯುವ ‘ಶ್ರೇಷ್ಠ’ರಿದ್ದಾರೆ. ಮೀಡಿಯೋಕರ್‌ಗಳಿಗೆ ಪ್ರೋತ್ಸಾಹವೇ ಸಲ್ಲದೆಂದು ತೀರ್ಪು ಕೊಡುತ್ತಾರೆ. ಮೀಡಿಯೋಕರ್‌ಗಳಿಗೆ ಪ್ರೋತ್ಸಾಹ ಕೊಡುತ್ತಲೇ ಆ ಹಂತವನ್ನು ಮೀರುವಂತೆ ಮಾಡುವುದು ಒಂದು ಜವಾಬ್ದಾರಿಯಲ್ಲವೆ? ಯಾಕೆಂದರೆ ಸಾಮಾಜಿಕ ಶ್ರೇಣೀಕರಣ, ಅಧ್ಯಯನದ ಕೊರತೆ, ಮುಂತಾದ ಕಾರಣಗಳಿಂದ ಮೀಡಿಯೋಕರ್ ಸ್ಥಿತಿಯಲ್ಲಿ ಅನೇಕರು